

# ಎದೆಯ ಭಾವನದಿಯಲ್ಲಿ ನೆನಪಿನ ಹಾಯಿದೋಣಿ..

ಭೂಮಿ ತಿರುಗುತ್ತಿದೆ, ಕಾಲಚಕ್ರವೂ ಕೂಡ. ಎಷ್ಟಾದರೂ ಚಲನೆಯೇ ಅಲ್ಲವಾ ಬದುಕು. ಬೇಸಿಗೆ ರಜೆ ಕಳೆದು ಮುಂಗಾರಿನೊಂದಿಗೆ ಶಾಲಾರಂಭಕ್ಕೆ ಒಗ್ಗಿಕೊಳ್ಳುವ ವೇಳೆ, ಗಡಿಬಿಡಿಯಲ್ಲಿ ಸಿದ್ಧಗೊಂಡು ಶಾಲೆ ಕಡೆ ಮುಖ–ಮಾಡಿದ ಕಂದಮ್ಮಗಳಿಗೆ ಟಾಟಾ ಹೇಳಿಯಾದ ಮೇಲೆ ನನ್ನೊಳಗೆ ಎಂಥದೋ ಚಡಪಡಿಕೆ. ಆಗಾಗ ತೊಟ್ಟಿಕ್ಕುವ, ಬಿಡದೇ ಕಾಡುವ– ಕಲಕುವ ಸ್ಮೃತಿಬಿಂದು–ಗಳು ಮನಸ್ಸನ್ನು ಹಸಿಹಸಿಯಾಗಿ ತೋಯಿಸ್ತಾನೆ ಇದ್ದಾವೆ ಹೀಗೆ.. ಆಗಷ್ಟೇ ಹನಿಸಿ ಹೋದ ಮುಂಗಾರಿನ ಮಳೆಯ ಹಾಗೆ. ನಂಗೊತ್ತು ಇಲ್ಲಿ ತಾಕುವ ಕೆಲ ಹನಿಗಳು ನಿಮ್ಮವೂ ಹೌದು.

ಟಿವಿ, ಮೊಬೈಲ್, ಇಂಟರ್ನೆಟ್ ಮಾಯೆಗಳಿನ್ನೂ ಆವರಿಸಿರದ ದಿನಗಳಲ್ಲಿ ಮಲೆನಾಡ ಹಳ್ಳಿಮೂಲೆಯಲ್ಲಿ ನಮ್ಮ ಬಾಲ್ಯ. ಕೊನೇಪಕ್ಷ ನೆರೆಮನೆಯ ಪೋರರಿಗಿದ್ದಂಥ, ಇಷ್ಟದಂತೆ ಆಡಿ ಕುಣಿವ ಊರು ಸುತ್ತುವ ಸ್ವಾತಂತ್ರ್ಯಗಳೂ ಇಲ್ಲದ, ಸೈಕಲ್ ಸವಾರಿ, ಪೇಟೆ, ಸಂತೆ, ಜಾತ್ರೆಗಳೆಲ್ಲ ನಿಷಿದ್ಧಗೊಂಡಿದ್ದ ದಿನಗಳವು. ಬಿಗುಗೊಂಡಿದ್ದ ಮನಸ್ಸುಗಳಿಗೆ ಕಟ್ಟಳೆಗಳಿಂದ ಮುಕ್ತವಾಗುವ ನಿತ್ಯಕಾತರ. ಆಗಿನ ನಮ್ಮ ಇಡೀ ವರ್ಷದ ಸಂಭ್ರಮವೆಂದರೆ ಬೇಸಿಗೆ ರಜೆಯಲ್ಲಿನ ಅಜ್ಜನ ಮನೆ ಯಾತ್ರೆ ಮಾತ್ರ. ಏಪ್ರಿಲ್ ಬಂತೆಂದರೆ ಎಂಥದೋ ಸಡಗರ.. ಶಾಲೆಯ ಪಾಠ, ಪರೀಕ್ಷೆಗಳನ್ನು ಮುಗಿಸಿ ಸಂಜೆ ಮನೆ ಸೇರುವಷ್ಟರಲ್ಲೆ ಅಲ್ಲಿ ನಮ್ಮಜ್ಜ ಹಾಜರ್. ಹಣ್ಣು, ತರಕಾರಿ, ಗೆಣಸು, ಕಡಲೆ ಅವಡೆಗಳನ್ನು ತುಂಬಿಕೊಂಡ ಎರಡೆರಡು ಚೀಲದಲ್ಲಿ ಮಣಭಾರ ಹೊತ್ತು ದುರ್ಗಮ ಕಾಡು ಗುಡ್ಡವನ್ನು ಹಾದು ಬರೋಬ್ಬರಿ ಹತ್ತು ಮೈಲಿ ದೂರ ಏಕಾಂಗಿಯಾಗಿ ಸಾಗಿ, ಮೊಮ್ಮಕ್ಕಳನ್ನು ಕರೆದೊಯ್ಯಲು ಕಾತರಿಸಿ ಬರುತ್ತಿದ್ದರು ಅಜ್ಜ. ನಮಗಂತೂ ಆ ರಾತ್ರಿಯೆಲ್ಲ ಖುಷಿಯಿಂದ ನಿದ್ದೆ ಇಲ್ಲ. ಮಾರನೇ ಬೆಳಿಗ್ಗೆಯೇ ಕೈ–ಕೈಹಿಡಿದು ಕಾಡು ಹಾದಿಯ ನಡಿಗೆ, ಅಜ್ಜನ ಮನೆ ಕಡೆಗೆ. ಆ ಕಾಲಕ್ಕೆ ನಡೆದಷ್ಟೂ ದೂರ ಸರಿಯುವ ದಾರಿಯದು. ಮೂರ್ನಾಲ್ಕು ಹಳ್ಳಿಗಳನ್ನು ಹಾದುಬಂದ ಮೇಲೆ ದಾಟಬೇಕಿತ್ತು ಕಡಿದಾದ ಕಾಡುಗುಡ್ಡವನ್ನು. ಅದು ಶೆಟ್ಟಿಹಳ್ಳಿ ಅಭಯಾರಣ್ಯದ ಒಡಲಿನ ರುದ್ರ ರಮಣೀಯ ತಾಣ. ಹೆಜ್ಜೆಮೂಡಿರದ ಹಾದಿಯಲ್ಲಿ ನಿಜಕ್ಕೂ ನಮ್ಮದೊಂದು ರೋಚಕ ಯಾನ.

ಗಿಡಗಂಟೆಗಳನ್ನು ಗಟ್ಟಿಹಿಡಿದು ಎದೆ ಎದುರು ನೆಟ್ಟಗೆ ಸೆಟೆದು ನಿಂತ ಏರುಮಾರ್ಗವನ್ನು ಅವುಡುಗಚ್ಚಿ ಮೆಟ್ಟಿನಿಲ್ಲುತ್ತಾ, ಬೇರು–ಬಿಳಲುಗಳನ್ನು, ಬಿದ್ದ ಮರಮಟ್ಟುಗಳನ್ನು ಹತ್ತಿಳಿದು ಕಡಿದಾದ ಜಾರುವ ದಾರಿಯಲ್ಲಿ ಜಾಗ್ರತೆಯ ಹೆಜ್ಜೆ ಇಡುತ್ತಿದ್ದರೆ ಮೈಮನಸುಗಳಿಗೆ ಅಲ್ಲೊಂದು ವಿಶಿಷ್ಟ ಅನುಭೂತಿ. ಅದು ಹತ್ತಿಯಂತ ಮೃದುನೆಲ, ಬಿಸಿಲು ಕಾಣದಂಗೆ ಮುಗಿಲು ತುಂಬಾ ನಿತ್ಯಹರಿದ್ವರ್ಣದ ಚಪ್ಪರ, ಸುತ್ತಲೂ ಹಗಲುಗತ್ತಲು. ಇಳಿಜಾರು ದಾರಿಯ ಅಂಚಿನಲ್ಲಿ ಆಳ ಕಮರಿಗೆ ಮೆಲ್ಲಗೆ ಜಾರುವ ಝರಿ, ದಾರಿಯುದ್ದಕ್ಕೂ ಜುಳುಜುಳು. ನಮ್ಮಗಳ ಮಾತು ಕೇಳದಂಗೆ ಕಿವಿಗುದ್ದುವ ಜೀರುಂಡೆ ಸದ್ದು, ಪೊದೆಯೊಳಗೆ ಹಕ್ಕಿ ಹಿಂಡಿನ ವಿಚಿತ್ರ ಕಲರವ, ತಣ್ಣಗೆ ಮುಟ್ಟಿ ಹೋದ ಯಾವುದೋ ಪುಟ್ಟ ಹಕ್ಕಿಯ ಸ್ಪರ್ಶ, ತಂಪು ದಾರಿಯಲ್ಲಿ ತೊಟ್ಟಿಕ್ಕುವ ಜೇನುಗೂಡು, ಕೈತಾಕುವ ಹೂಬಳ್ಳಿಗಳ ಬಗೆ ಬಗೆಯ ಘಮ. ಹೆಕ್ಕಿಕೊಂಡ ಹಕ್ಕಿ ಪುಕ್ಕ, ಜಿಂಕೆ ಕೊಂಬು..ಹೀಗೆ, ಹಾದಿ ತುಂಬ ನಾನಾ ನಮೂನೆಯ ಕ್ರಿಮಿ–ಕೀಟ, ಪಕ್ಷಿ–ಪ್ರಾಣಿ, ಸಸ್ಯ ಸಂಕುಲದ ದಿವ್ಯ ಪರಿಚಯ. ಇಲ್ನೋಡಿ 'ಹುಲಿ ಹೆಜ್ಜೆ', ಅಲ್ಲಿಯದು 'ಆನೆ ಲದ್ದಿ' ಅಂತ ಅಜ್ಜನ ವಿವರಣೆ. ಗುಡ್ಡದ ನೆತ್ತಿಯಲ್ಲಿ ದಾರಿಗೆಬಿದ್ದ ಮುಳ್ಳುಕಂಟಿಗಳನ್ನು ಸರಿಸಿ, ಅಜ್ಜ ಬಿರಬಿರನೆ ನಡೆಯುತ್ತಿದ್ದರೆ, ಅಂಟಿಕೊಳ್ಳುವ 'ಇಂಬಳ'ಕ್ಕೆ ಬೆದರಿ, ಬೊಬ್ಬೆಹಾಕುತ್ತಾ ಓಡಿ ಓಡಿ ಗುಡ್ಡ ದಾಟುತ್ತಿದ್ದೆವು ನಾವು. ಆಗದವರು ಅಜ್ಜನ ಹೆಗಲೇರುತ್ತಿದ್ದೆವು.

ಮುಖ ಬಾಡಿ, ಮಾತು ಸೋತು, ನಗು ಕರಗಿ, ಕಾಲು ಸೊರಗಿ, ಕೂತು ನಿಂತು ಹೇಗೋ ಕೊನೆಗೆ ಏರಿಳಿದಾಗ, ಹಸಿರಗವಿಯಿಂದ ಹೊರಬರುವ ತಪ್ಪಲಲ್ಲಿ ತಂಪಾದ ನೀರತೊರೆ. ಬೊಗಸೆ ತುಂಬ ಮೊಗೆಮೊಗೆದು ಕುಡಿದು, ದಾರಿ ಖರ್ಚಿಗೆ ತಂದ ಕಡಲೆಕಾಳನ್ನು ಬಿಡಿಸಿ ತಿಂದು, ಸುಧಾರಿಸಿಕೊಂಡು ದಣಿದ ಕಾಲುಗಳಿಗೆ ಜೀವ ತುಂಬುತ್ತಿದ್ದೆವು.

ಮೂರ್ನಾಲ್ಕು ಮೈಲಿ ಬಾಕಿಯಿದ್ದರೂ..ಅಜ್ಜ 'ಓ ಅಲ್ಲಿ ಕಾಣುತ್ತಲ್ಲಾ..ಆ ಗದ್ದೆ ಬಯಲಿನಾಚೆಗಿರೋದೆ ನಮ್ಮೂರು ಹೆಗಲತ್ತಿ' ಅಂತ ಪುಸಲಾಯಿಸಿ, ಸುಳ್ಳೆ ಕಥೆ ಹೇಳುತ್ತಾ ಹೇಗೋ ಮನೆ ಮುಟ್ಟಿಸಿಬಿಡ್ತಿದ್ರು.

ಅದು 'ಹೆಗಲತ್ತಿ', ಬಸ್ಸಿನ ದಾರಿಯಿಂದ ಎಂಟತ್ತು ಮೈಲಿ ದೂರದ, ಯಾವ ಸಂಪರ್ಕ ಸೌಲಭ್ಯಗಳನ್ನೂ ಕಂಡಿರದ ತನ್ನಷ್ಟಕ್ಕೆ ತನ್ನಿಷ್ಟಕ್ಕೆ ತಾನಿದ್ದ ಊರದು. ಎಲ್ಲಿಂದಲೋ ಅಲ್ಲಿಗೆ ಬರಿಗೈಲಿ ಬಂದು, ದಟ್ಟಡವಿಯ ಪುಟ್ಟ ಜಾಗದಲ್ಲಿ ನೆಲೆ ನಿಂತವರು ನಮ್ಮಜ್ಜ. ಮನೆ, ಗದ್ದೆ–ತೋಟ, ಕೆರೆ–ಬಾವಿಗಳನ್ನು ಕಟ್ಟಿಕೊಂಡು, ಮಡದಿ–ಮಕ್ಕಳು, ದೂರದ ಶಾಲೆ, ಸುಡುವ ಹಸಿವು, ಕಾಡುವ ಖಾಯಿಲೆ,